ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಉಪವಿಭಾಗ-1ರ ಕಛೇರಿ
ಚಾವಿಸನಿನಿ.ಕೆ.ಆರ್.ಪೇಟೆ-571426
Telephone No:9448994910

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
Subdivision-1 Office,
CESC, K R Pet-571426
Web Site:cescmysore.karnataka.gov.in
E-mail ID:aeekrpet1@cescmysore.org
Company Identity Number[CIN]:- U40109KA2004SGC035177

ಕ್ರಮಾಂಕ:ಸಕಾನಿಇಂ(ವಿ)/ಸಇಂ(ತಾಂ)/2021-22/ 24-84 ದಿನಾಂಕ: 1-01-22.

## ಸಭಾ ನಡಾವಳಿ

ವಿಷಯ:-ದಿನಾಂಕ 29-12-2021 ರಂದು ಕೆ.ಆರ್.ಪೇಟೆ ಉಪವಿಭಾಗ-1 ರ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕೆ.ಆರ್.ಪೇಟೆ ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1.ಕಾರ್ಯನಿರ್ವಾಹಕ ಇಂಜಿನಿಯರ್(ವಿ)
2.ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಉಪವಿಭಾಗ-1
3.ಪ್ರಭಾರ ಸಹಾಯಕ ಇಂಜಿನಿಯರ್(ತಾ) ಉಪವಿಭಾಗ-1
4.ಕಿರಿಯ ಇಂಜಿನಿಯರ್(ವಿ) ಅಕ್ಕಿಹೆಬ್ಬಾಳು ಶಾಖೆ
5.ಕಿರಿಯ ಇಂಜಿನಿಯರ್(ವಿ) ಬೂಕನಕೆರೆ ಶಾಖೆ
6. ಕಿರಿಯ ಇಂಜಿನಿಯರ್(ವಿ) ಶೀಳನೆರೆ ಶಾಖೆ
7. ಕಿರಿಯ ಇಂಜಿನಿಯರ್(ವಿ) ವಿಠಲಾಪುರ ಶಾಖೆ

| ಸಭೆಗೆ ಹಾಜರಿದ್ದ ಗ್ರಾಹಕರಿಂದ ಪಡೆದ ದೂರುಗಳು | ಸಂಬಂಧಪಟ್ಟ ಅಧಿಕಾರಿ /ಶಾಖೆ | ಹಿರಿಯ ಅಧಿಕಾರಿಗಳು ದೂರುಗಳಿಗೆ ಸ್ಥಳದಲ್ಲಿ ನೀಡಿದ ಉತ್ತರಗಳು ಮತ್ತು ಸೂಚನೆಗಳು |
|---|---|---|
| 1.ಎಂ.ಬಿ.ಚಂದ್ರಶೇಖರ್ ಮಡುವಿನಕೋಡಿ ಫೋನ್ ನಂ:9845795005 ಹೊಸಕೋಟೆ ಬೋರೆ ಹತ್ತಿರ ಸರ್ವೆ ನಂ 130ಜಮೀನಿನ ಮುಖ್ಯ ರಸ್ತೆಯಲ್ಲಿ 100KVA ಪರಿವರ್ತಕದ Structure ಶಿಥಿಲಗೊಂಡಿರುವ ಬಗ್ಗೆ 02.07.2015 ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಅರ್ಜಿ ನೀಡಿದ್ದು, ಹಲವು ಬಾರಿ ಮೌಖಿಕವಾಗಿ ತಿಳಿಸಿದ್ದು, ಹಾಗೂ ಸದರಿ 100KVA ಪರಿವರ್ತಕದಲ್ಲಿ 4 ಕಂಬಗಳು ಬಾಗಿರುತ್ತವೆ.ಇಲ್ಲಿಯವರೆಗೂ ಕೆಲಸ ಆಗಿರುವುದಿಲ್ಲ ಹಾಗೂ ತೋಟದ ಮನೆಗೆ NJY ಸಂಪರ್ಕ ನೀಡಲು ಕೋರಿದ್ದರು. | ಶಾಖಾಧಿಕಾರಿಗಳು/ ಅಕ್ಕಿಹೆಬ್ಬಾಳು | 1.ಅಕ್ಕಿಹೆಬ್ಬಾಳು ಶಾಖೆಯ ಕಿರಿಯ ಇಂಜಿನಿಯರ್(ವಿ) ರವರಿಗೆ 100KVA ಪರಿವರ್ತಕ ಶಿಥಿಲಗೊಂಡಿರುವ ಅಂದಾಜು ಪಟ್ಟಿಯನ್ನು ತಕ್ಷಣ ವಿಭಾಗಿಯ ಕಛೇರಿಗೆ ಸಲ್ಲಿಸಿ ಕಾಮಗಾರಿಯನ್ನು ಮಾಡುವಂತೆ ತಿಳಿಸಿದರು.ಹಾಗೂ ಬಾಗಿರುವ ಕಂಬಗಳನ್ನು ಒಂದು ವಾರದೊಳಗೆ ಸರಿಪಡಿಸುತ್ತೇವೆ ಎಂದು ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು. |
| 2.ಮಂಜುನಾಥ ನಾಟಬೋಗನಹಳ್ಳಿ ಫೋನ್ ನಂ:9980656321 ನಾಲ್ಕು ವರ್ಷದಿಂದ ನಮಗೆ ನಿರಂತರ ವಿದ್ಯುತ್ ಸಂಪರ್ಕ ಇರುವುದಿಲ್ಲ ಶೀಳನೆರೆ ವಿದ್ಯುತ್ ವಿತರಣಾ ಕೇಂದ್ರದಿಂದ ಹೊಸ ಲೈನ್‌ಗೆ 10 ಕಂಬ ಹಾಕಿ ಸರಿಪಡಿಸಬೇಕು ,Overload ಆಗಿರುವುದನ್ನು ಸರಿಪಡಿಸುವುದು. | ಶಾಖಾಧಿಕಾರಿಗಳು/ ವಿಠಲಾಪುರ | 2.ವಿಠಲಾಪುರ ಶಾಖೆಯ ಕಿರಿಯ ಇಂಜಿನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ತಕ್ಷಣ 10 ಕಂಬಗಳನ್ನು ಹಾಕಿಕೊಡುತ್ತೇವೆ ಎಂದು ತಿಳಿಸಿದರು. |



Scanned by CamScanner

| | | |
|---|---|---|
| 3.ರವಿಕುಮಾರ್ ಸಿಂಧುಘಟ್ಟ ಫೋನ್ ನಂ:-9448877801 ನಮ್ಮ ಗ್ರಾಮದಲ್ಲಿ 10.30 ರಾತ್ರಿಯವರೆಗೂ ವಿದ್ಯುತ್ ಸಮಸ್ಯೆಗಳನ್ನು ಸರಿಪಡಿಸಲು ಲೈನ್ ಮ್ಯಾನ್‌ಗಳನ್ನು ಬದಲಾಯಿಸಿಕೊಡುವ ಬಗ್ಗೆ ಹಾಗೂ 100KVA TC Overload ಆಗಿದ್ದು ತುಂಬಾ ತೊಂದರೆಯಾಗುತ್ತಿದೆ ಇದನ್ನು ಸರಿಪಡಿಸಬೇಕು. ಸಿಂಧುಘಟ್ಟ ಗ್ರಾಮದಲ್ಲಿ Reconducting wire ನೀಡಲು ತಿಳಿಸಿದರು. ಗ್ರಾಮ ದೇವಸ್ಥಾನದ ಹತ್ತಿರವಿರುವ ಕಂಬವನ್ನು ಸ್ಥಳಾಂತರಿಸಿಕೊಡಬೇಕೆಂದು ರವಿಕುಮಾರ್ ತಿಳಿಸಿದರು. | ಶಾಖಾಧಿಕಾರಿಗಳು/ ಶೀಳನೆರೆ | 3.ಶೀಳನೆರೆ ಶಾಖೆಯ ಕಿರಿಯ ಇಂಜಿನಿಯರ್(ವಿ) ರವರಿಗೆ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ Additional 25KVA TC ಗಳನ್ನು ಮಾಡಲು ತಿಳಿಸಿದರು ಹಾಗೂ Reconducting ಮಾಡಲು ವೈರ್ ನೀಡಬೇಕು ಎಂದು ತಿಳಿಸಿದರು. |
| 4.ಹೊನ್ನೇಗೌಡರು ಅಕ್ಕಿಮಂಚನಹಳ್ಳಿ ಫೋನ್ ನಂ:-9743022709 ಅಕ್ಕಿಮಂಚನಹಳ್ಳಿ ಹತ್ತಿರ ಇರುವ ಲೈನ್‌ಗೆ Reconducting ಮಾಡಿರುವುದಿಲ್ಲ ಹಾಗೂ ಗ್ರಾಮಗಳಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಬೇಕು ಎಂದು ತಿಳಿಸಿದರು. | ಶಾಖಾಧಿಕಾರಿಗಳು/ ಶೀಳನೆರೆ | 4.ಶೀಳನೆರೆ ಶಾಖೆಯ ಕಿರಿಯ ಇಂಜಿನಿಯರ್(ವಿ) ರವರು ಅಂದಾಜು ಪಟ್ಟಿ ಮಾಡಿ ಕಾರ್ಯಾದೇಶ ನೀಡಿದ್ದು ಸಾಮಾಗ್ರಿಗಳ ಬೇಡಿಕೆ ಇರುತ್ತದೆ ಎಂದು ತಿಳಿಸಿದರು. |
| 5.ಪುಟ್ಟೇಗೌಡರು ಫೋನ್ ನಂ:-9141396642 ಸುಟ್ಟು ಹೋದ ಪರಿವರ್ತಕಗಳನ್ನು ಬದಲಾಯಿಸಲು ತೆಗೆದುಕೊಂಡ ಕ್ರಮ ಹಾಗೂ ಎಷ್ಟು ದಿನಗಳಲ್ಲಿ ಕೊಡಬೇಕು. ಕಚೇರಿಯಲ್ಲಿ ಸುಟ್ಟು ಹೋದ ಪರಿವರ್ತಕಗಳ ವಿವರವನ್ನು ನಾಮಫಲಕದಲ್ಲಿ ಹಾಕಬೇಕು ಮತ್ತು ಜನ ಸಂಪರ್ಕ ಸಭೆ ಹೊರಗೆ ಮಾಡಬೇಕು ಎಂದು ತಿಳಿಸಿ IP ಸೆಟ್ ,ಭಾಗ್ಯ ಜ್ಯೋತಿ ಸಂಪರ್ಕ ಕಡಿತಗೊಳಿಸಬಾರದೆಂದು ತಿಳಿಸಿದರು. | ಶಾಖಾಧಿಕಾರಿಗಳು/ ಎಲ್ಲಾ ಶಾಖೆಗಳಿಗೆ | 5. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಸುಟ್ಟು ಹೋದ ಪರಿವರ್ತಕಗಳನ್ನು 24 ಗಂಟೆಯಲ್ಲಿ ಬದಲಾಯಿಸುತ್ತಿದ್ದೇವೆ, ಕಛೇರಿಯಲ್ಲಿ ಸುಟ್ಟುಹೋದ ಪರಿವರ್ತಕಗಳ ಪಟ್ಟಿಯನ್ನು ಕಚೇರಿಯ ನಾಮಫಲಕದಲ್ಲಿ ಹಾಕಿಸುತ್ತೇವೆ ಎಂದು ತಿಳಿಸಿದರು. ಹಾಗೂ ಎಲ್ಲಾ ಪರಿವರ್ತಕದಲ್ಲಿ ಅನಧಿಕೃತ ಬಾವಿಗಳು ಇದ್ದು,ನಿಗಮದಿಂದ ಕರಪತ್ರಗಳನ್ನು ವಿತರಿಸಿ ಅಕ್ರಮವಿರುವ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಎಲ್ಲಾ ಶಾಖಾ ವಲಯದಲ್ಲಿ ತಿಳಿಸಲಾಗಿದೆ. ಸಕ್ರಮಗೊಳಿಸದಿದ್ದಲ್ಲಿ ಅಕ್ರಮ ಪಂಪ್‌ಸೆಟ್‌ಗಳನ್ನು ಸಂಪರ್ಕ ಕಡಿತಗೊಳಿಸಲು ಸೂಚಿಸಲಾಯಿತು. |
| 6.ಮಹೇಶ್ ಸೋಮನಹಳ್ಳಿ ಫೋನ್ ನಂ:-902265964 ಪುರ ಗ್ರಾಮದಲ್ಲಿ ಶಿಥಿಲಗೊಂಡಿರುವ ಕಂಬಗಳನ್ನು ಬದಲಾಯಿಸಲು ಹಾಗೂ ಊರಿನ ಹೊರ ಭಾಗದಲ್ಲಿ ಇರುವ ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ. | ಶಾಖಾಧಿಕಾರಿಗಳು/ ಅಕ್ಕಿಹೆಬ್ಬಾಳು | 6. ಅಕ್ಕಿಹೆಬ್ಬಾಳು ಶಾಖೆಯ ಕಿರಿಯ ಇಂಜಿನಿಯರ್(ವಿ) ರವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ. |
| 7.ಬಸವರಾಜು ಬಿರಿಕಲ್ ಫೋನ್ ನಂ:-9980702590 ಹೊಸದಾಗಿ ಬದಲಾಯಿಸಿದ ಎಲೆಕ್ಟ್ರಾನಿಕ್ ಮೀಟರ್‌ಗಳು ಹೆಚ್ಚು ಬಿಲ್ ಬರುತ್ತದೆ. | ಶಾಖಾಧಿಕಾರಿಗಳು/ ಎಲ್ಲಾ ಶಾಖೆಗಳಿಗೆ | 7. ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಹಳೆ ಮಾಪಕಗಳು ಸರಿ ಇಲ್ಲದ ಕಾರಣ ,ಹೊಸದಾಗಿ ಎಲೆಕ್ಟ್ರಾನಿಕ್ ಮಾಪಕಗಳನ್ನು ಅಳವಡಿಸಲಾಗಿದೆ.ಹಳೆ ಮಾಪಕಗಳಲ್ಲಿ ,MD Record ಆಗುತ್ತಿರಲಿಲ್ಲ ಎಂದು ತಿಳಿಸಿದರು. |
| 8.ಕುಮಾರ್ ಮಾರ್ಗೋನಹಳ್ಳಿ ಫೋನ್ ನಂ:-9740788952 ಜನ ಸಂಪರ್ಕ ಸಭೆಯನ್ನು ನಡೆಸುವ ಮುನ್ನ ಕರಪತ್ರಗಳನ್ನು ಹಂಚಬೇಕು ಎಂದು ತಿಳಿಸಿದರು.ಪರಿವರ್ತಕಗಳಿಗೆ Overload ಆಗಿರುವುದನ್ನು ನಿಮ್ಮ ನಿಗಮದಿಂದ ಕಾಮಗಾರಿಗಳನ್ನು ಮಾಡಿರುತ್ತೀರ ಹೆಚ್ಚು ಪರಿವರ್ತಕಗಳು ವಿಫಲಗೊಳ್ಳುತ್ತಿಲ್ಲ ಎಂದು ತಿಳಿಸಿದರು ಹಾಗೂ ಕೃಷಿ ಪಂಪ್‌ಸೆಟ್‌ಗಳಿಗೆ Solar ಅಳವಡಿಸಿಕೊಡಲು ಸೂಕ್ತ ಮಾಹಿತಿಗಳನ್ನು ತಿಳಿಸಲು ಕೋರಿದರು. | ಶಾಖಾಧಿಕಾರಿಗಳು/ ಎಲ್ಲಾ ಶಾಖೆಗಳಿಗೆ | 8.ಜನ ಸಂಪರ್ಕ ಸಭೆಯನ್ನು ನಡೆಸುವ ಮುನ್ನ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ Solar ಅಳವಡಿಸಿಕೊಡಲು ನಿಗಮದ ವೆಬ್‌ಸೈಟ್‌ನಲ್ಲಿ ಅರ್ಜಿ ನೋಂದಣಿ ಮಾಡಿಸಬೇಕು ಎಂದು ತಿಳಿಸಿದರು. |
| 9.ಎಂ.ಜಿ ಕುಮಾರ್ ಮಳ್ಳಿ ನಿರಂತರ ಜ್ಯೋತಿ ಕಾಮಗಾರಿಯನ್ನು ಮುಗಿಸದೇ ಇರುವ ಬಗ್ಗೆ. ಮಳ್ಳಿ ಗ್ರಾಮದಲ್ಲಿ ವಿದ್ಯುತ್ ಪರಿವರ್ತಕಕ್ಕೆ Reconducting ಮಾಡಲು ತಿಳಿಸಿದರು. | ಶಾಖಾಧಿಕಾರಿಗಳು/ ಅಕ್ಕಿಹೆಬ್ಬಾಳು | 9. ಅಕ್ಕಿಹೆಬ್ಬಾಳು ಶಾಖೆಯ ಕಿರಿಯ ಇಂಜಿನಿಯರ್(ವಿ) ರವರು ಒಂದು ವಾರದಲ್ಲಿ ಮಳ್ಳಿ ಗ್ರಾಮಕ್ಕೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ತಿಳಿಸಿರುತ್ತಾರೆ. |



Scanned by CamScanner

| | | |
|---|---|---|
| 10.ಸುರೇಶ ಪತ್ತರಹಳ್ಳಿ ಫೋನ್ ನಂ:-948435383 ಪತ್ತರಹಳ್ಳಿ ಗ್ರಾಮದ ಪರಿವರ್ತಕದಲ್ಲಿ Oil ಕಡಿಮೆಯಾಗಿದ್ದು ಹಾಗೂ Reconducting ಮಾಡಿಸಿಕೊಡಲು ತಿಳಿಸಿದರು. | ಶಾಖಾಧಿಕಾರಿಗಳು/ ವಿಠಲಾಪುರ | 10. ವಿಠಲಾಪುರ ಶಾಖೆಯ ಕಿರಿಯ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ತಕ್ಷಣ ಅಂದಾಜು ಪಟ್ಟಿ ಸಲ್ಲಿಸಲು ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರು ಸೂಚಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ & ಪಾಲನಾ ಉಪವಿಭಾಗ-೧
ಸೆಸ್ಕ್,ಕೆ.ಆರ್.ಪೇಟೆ

ಪ್ರತಿಗಳು:

1.ಅಧೀಕ್ಷಕ ಇಂಜಿನಿಯರ್ (ವಿ) ಕಾ ಮತ್ತು ಪಾ ವೃತ್ತ ಮಂಡ್ಯ ರವರ ಅಹವಾಗನೆಗೆ.
2.ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕಾ ಮತ್ತು ಪಾ ವಿಭಾಗ ಕೆ.ಆರ್.ಪೇಟೆ
3.ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಉ.ಪ-1 ಕೆ.ಆರ್.ಪೇಟೆ



Scanned by CamScanner